ಶ್ರೀ ಬಿ. ಕೆ. ಪುಟ್ಟಯ್ಯ.—ನರಬರಾಜು ಮಾಡಿರುವುದು 740, ಉಪಯೋಗಿಸಿದವು 532 ಹಾಗಾದರೆ ಉಳಿದಿರುವುದು 165 ಹೇಗಾಗುತ್ತೆ? ಇನ್ನು 43 ಟ್ಯೂಬುಗಳು ಏನಾದವು?

ಶ್ರೀ ಕೆ. ನಾಗಪ್ಪ ಆಳ್ವ.—ನಂಬ್ಯೆ ಕೊಟ್ಟಿದ್ದರಲ್ಲಿ ಏನಾದರೂ mistake ಇರಬಹುದು.

ಶ್ರೀ ಜಿ. ರಾಮೇಗೌಡ.—ಈ ಪೆತಿಡಿನ್ ಇಂಜೆಕ್ಷನ್ನನ್ನು ಯಾವ ಕಾಹಿಲೆಗೆ ಉಪಯೋಗಿಸುತ್ತೀರ?

Sri K. NAGAPPA ALVA.—For pain relief and sleep inducing.

Bridge across Shimsha River on Mandya-Amruthur Road

*Q—470. Sri S. M. KRISHNA (Maddur).—

Will the Government be pleased to state :—

(*a*) when the bridge across Shimsha river on Mandya-Amruthur road was completed (near Kowdley in Maddur) ;

(*b*) the amount spent on the bridge ;

(*c*) whether the said road is completed ; and if not the reasons therefor ?

A.—Sri VEERENDRA PATIL (Minister for Public Works).—

(*a*) During 1960.

(*b*) Rs. 3,45,570.

(*c*) Not yet ; the work is held up due to finalisation of acquisition proceedings and also due to stay order issued by the High Court.

ಶ್ರೀ ಎಸ್. ಎಂ. ಕೃಷ್ಣ.—ಈ ಹೈಕೋರ್ಟು ತಡೆ ಆಜ್ಞೆ ಯಾವಾಗ ಬಂದಿತು?

†ಶ್ರೀ ವೀರೇಂದ್ರ ಪಾಟೀಲ್.—ಯಾವಾಗ stay order ಬಂದಿತು ಅನ್ನುವುದು ನನಗೆ ಗೊತ್ತಿಲ್ಲ.

Sri S. M. KRISHNA.—So the Government is not sure if a stay order has been received from the High Court ?

Sri VEERENDRA PATIL.—The stay order has been received. It is clear here that the party has filed a writ petition in the High Court and the stay order has been issued by the High Court.

ಶ್ರೀ ಎಸ್. ಎಂ. ಕೃಷ್ಣ.—ಈಗ ಅಲ್ಲಿ ಜನಗಳಿಗೆ ಮತ್ತು ವಾಹನಗಳಿಗೆ ಓಡಾಡುವುದಕ್ಕೆ ಬಹಳ ತೊಂದರೆಯಾಗಿದೆ ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ! ಏನಾದರೂ ಮಾಡಿ ಅನುಕೂಲ ಮಾಡಿಕೊಡುವುದಕ್ಕೆ ಆಗುತ್ತದೆಯೇ!

ಶ್ರೀ ವೀರೇಂದ್ರ ಪಾಟೀಲ್.—ರೈಟ್ ಬ್ಯಾಂಕದು, total length 5 ಮೈಲು 2 ಫರ್ಲಾಂಗು ಗಳು. ನನ್ನ ಹತ್ತಿರ ಅಲೈನ್‌ಮೆಂಟಿದೆ. ಈ 5 ಮೈಲು 2 ಫರ್ಲಾಂಗಿನಲ್ಲಿ, 4 ಮೈಲು 2 ಫರ್ಲಾಂಗ್ ಮಾಡಿದ್ದೇವೆ. ಇನ್ನು ಒಂದು ಮೈಲು ಮಾತ್ರ ಉಳಿದುಕೊಂಡಿದೆ. 5–6 ದಿವಸದಲ್ಲಿ ಕೆಲಸ ಮುಗಿಸ ಬಹುದು. Stay ಆರ್ಡರ್ ಬಂದಿರುವುದರಿಂದ, ಏನಾದರೂ ಮಾಡುವುದು ತಪ್ಪಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—3-4 ಲಕ್ಷ ರೂಪಾಯಿ ಖರ್ಚು ಮಾಡಿ ಹೀಗೆ ಜನಗಳಿಗೆ ತೊಂದರೆ ಮಾಡುವುದೆಲ್ಲಾ ಹೀಗೆ ರಿಟ್ ಹಾಕಲು ಏಕೆ ಅವಕಾಶ ಕೊಟ್ಟಿರಿ! ಮೊದಲು ಅಕ್ವಿಸಿಷ್ಷ ಪ್ರೊಸೀಡಿಂಗ್ಸ್ ಮುಗಿಸಿಕೊಂಡು ಆಮೇಲೆ ಕೆಲಸ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯವಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ಸ್ವಾಮಿ, ಸರ್ಕಾರ ಶ್ರೀ ರೇವಣ್ಣಸಿದ್ಧಪ್ಪನವರು ಹೇಳುವಂಥ ಸಲಹೆ ತೆಗೆದುಕೊಂಡು ಕೆಲಸಮಾಡಿದರೆ ಒಂದು ಕೆಲಸವೂ ಆಗುವ ಹಾಗಿಲ್ಲ. ಮೊದಲು ಜನ ನಮ್ಮ ಭೂಮಿ ಕೊಡುತ್ತೇವೆ, ಕೆಲಸ ಮಾಡಿಕೊಳ್ಳಿ ಎಂದು ಅನೇಕ ಜನ ಮುಂದೆ ಬಂದು ಕೊಡುತ್ತಾರೆ. ಅದರ ಮೇಲೆ ಕೆಲಸ ಮಾಡುತ್ತಾ ಇರುತ್ತೇವೆ ; ಅಕ್ವಿಸಿಷ್ಷ ಪ್ರೊಸೀಡಿಂಗ್ ನಡೆಯುತ್ತಾ ಇರುತ್ತದೆ. ಅಪ್ಪಿತಪ್ಪಿ ಈ ರೀತಿ ಹೈಕೋರ್ಟಿಗೆ, ಕೋರ್ಟುಗಳಿಗೆ ಜನ ಹೋಗುತ್ತಾರೆ. ಆವಾಗ ಜನಗಳಿಗೆ

ಕಷ್ಟವಾಗುತ್ತದೆ. ನೂರಕ್ಕೋ, ಸಾವಿರಕ್ಕೋ ಒಂದು ಈ ತರಹ ಪ್ರಸಂಗ ಒದಗುತ್ತದೆ. ಅದಕ್ಕೋ, ಮೊದಲೇ ಎಲ್ಲಾ ಪ್ರೊಸೀಡಿಂಗ್ಸ್ ಮುಗಿಸಿಕೊಂಡು, ನಂತರ ಕೆಲಸ ಮಾಡುತ್ತೇವೆಂದರೆ ಏನೂ ಕೆಲಸ ಆಗುವ ಹಾಗೇ ಇಲ್ಲ.

Sri K. LAKKAPPA.—If there had been complication they could have changed the place.

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದೆ ಅಲ್ಟೆನೆಟಿವ್ ಇದೆ. ಸುತ್ತಮುತ್ತ ಹೊಲಗಳಿವೆ. ಆ ಹೊಲಗಳಿಂದ ದಿವಿಯೇಷನ್ ಆಗಬೇಕಾದರೆ ಅವರೂ ಕೇಳುತ್ತಾರೆ; ಪ್ರತಿಯೊಬ್ಬರಿಗೂ ಈ ಕಾನೂನು ಇರುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಸ್ಥಳೀಯ ಅಧಿಕಾರಿಗಳು ಯಾರಾದರೂ ಸಂಬಂಧಪಟ್ಟ ಭೂಮಾಲಕರ ಜೊತೆಯಲ್ಲಿ ಏನಾದರೂ ನೆಗೊಷಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ನೆಗೋಷಿಯೇಟ್ ಮಾಡಿದ್ದೇ ಆದರೆ ನಾನು ಒಪ್ಪಿಕೊಳ್ಳುತ್ತೇನೆ. ಅವರು ನೆಗೋಷಿಯೇಟ್ ಮಾಡಿ ಪ್ರಶ್ನೆ ಬಗೆಹರಿಸಿದರೆ, ರೋಡು ಆದಷ್ಟು ಜಾಗ್ರತೆ ಆಗುತ್ತದೆ; ಜನರಿಗೂ ಅನುಕೂಲವಾಗುತ್ತದೆ. ಅವರು ಅವರ ಕಾರ್ಯಸ್ವಿಟ್ಯುಯನ್ಸಿಯನ್ನು serve ಮಾಡಿದಹಾಗಾಯಿತು. ಅವರು ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ.

Mr. SPEAKER.—It is a very good suggestion.

Grainages for the Production of Silkworm Eggs taken over by Government in the State.

*Q.—493. Sri J. NARAYANAPPA (Mulbagal).

Will the Government be pleased to state :—

(*a*) the number of grainages for the production of silkworm eggs that are taken over by the Government in the State ;

(*b*) the number of grainages run by private persons for which licences have been issued by the Government (districtwise information may be furnished) ;

(*c*) the agency that supplies cocoon seeds to the above grainages ?

A.—Sri R. DAYANANDA SAGAR (Deputy Minister for Sericulture).—

(*a*) 40.

(*b*) 522.

Districtwise Information.

1.	Bangalore District	...	94
2.	Mysore District	...	282
3.	Mandya District	...	42
4.	Kolar District	...	104
	Total	..	522

(*c*) The agencies are : Registered seed rearers in the Mysore seed area in respect of Mysore seed cocoons and foreign race seed rearers in respect of foreign race seed cocoons.

ಶ್ರೀ ಜೆ. ನಾರಾಯಣಪ್ಪ.—ಈ 40 ಗವರ್ನ್‌ಮೆಂಟ್ ಗ್ರೈನೇಜುಗಳಲ್ಲಿ, ಕೋಲಾರ ಜಿಲ್ಲೆಯಲ್ಲಿ ಎಷ್ಟಿವೆ ?